ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹಾಸ್ಟೆಲುಗಳ ಬಗ್ಗೆ.

೧೮೫೦. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಅಧಿಮ ಜಾತಿ ಜನರ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ?

ಆ) ಪ್ರತಿಯೊಂದರ ಹೆಸರು ಸೂಚಿತ ಹಾಗೂ ಅವುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಇ) ಈ ವಿದ್ಯಾರ್ಥಿ ನಿಲಯಗಳು ಸಂಸೂತ್ರವಾಗಿ ನಡೆಯುತ್ತಿವೆಯೇ ?

ಈ) ಅನೇಕ ವಿದ್ಯಾರ್ಥಿನಿಲಯಗಳಲ್ಲಿ ಆಹಾರ, ಇನ್ನಿತರ ಸೌಕರ್ಯದ ಕೊರತೆಯಿರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ಹಿಸಿ.

ಆ)

ಕ್ರಮ ಸಂಖ್ಯೆ.	ವಿದ್ಯಾರ್ಥಿ ನಿಲಯಗಳ ವಿವರ		ಮಂಜೂರಾತಿ ಸಂಖ್ಯೆ.
	(ಪರಿಶಿಷ್ಟ ಜಾತಿ)		
೧.	ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ,	ಬಂಟ್ವಾಳ	೫೦ — ವಿದ್ಯಾರ್ಥಿಗಳು.
೨.	,,	ಕುಂದಾಪುರ	೬೫ — ,,
೩.	,,	ಅಂಪಾರ, ಕುಂದಾಪುರ ತಾ.	೫೦ — ,,
೪.	,,	ಮೂಡುಬಿದ್ರೆ, ಕಾರ್ಕಳ ತಾ.	೪೦ — ,,
೫.	,,	ಬೈಂದೂರು, ಕುಂದಾಪುರ ತಾ.	೫೦ — ,,
೬.	,,	ಹೈಬ್ರಿ, ಕಾರ್ಕಳ ತಾ.	೫೦ — ,,
೭.	,,	ಮೂಲ್ಕಿ, ಮಂಗಳೂರು ತಾ.	೩೫ — ,,
೮.	,,	ಕದ್ರಿ, ಮಂಗಳೂರು ತಾ.	೯೦ — ,,
೯.	,,	ಬಜ್ಪೆ, ಮಂಗಳೂರು ತಾ,	೫೦ — ,,
೧೦.	,,	ಪುತ್ತೂರು, ಪುತ್ತೂರು ತಾ.	೧೧೫ — ,,
೧೧.	,,	ಸೂಳ್ಯ, ಸೂಳ್ಯ ತಾ,	೭೫ — ,,
೧೨.	,,	ಕಡಬ, ಸೂಳ್ಯ ತಾ.	೫೦ — ,,
೧೩.	,,	ಉಡುಪಿ, ಉಡುಪಿ ತಾ.	೫೦ — ,,
೧೪.	,,	ಪಡುಬಿದ್ರೆ, ಉಡುಪಿ ತಾ.	೫೦ — ,,
೧೫.	,,	ಯಡತೋಡಿ, ಉಡುಪಿ ತಾ.	೫೦ — ,,
೧೬.	ಸರ್ಕಾರಿ ಸಾರ್ವಜನಿಕ ಬಾಲಕೀಯರ ವಿದ್ಯಾರ್ಥಿನಿಲಯ	ಕಾಪು, ಬಂಟ್ವಾಳ, ತಾಲ್ಲೂಕು	೨೫ — ,,
೧೭.	,,	ಬಂಟ್ವಾಳ	೨೫ — ,,
೧೮.	,,	ಕುಂದಾಪುರ	೫೦ — ,,
೧೯.	,,	ಕಾರ್ಕಳ	೩೫ — ,,
೨೦.	,,	ಮಂಗಳೂರು	೧೦೦ — ,,

೨೧.	ಸರ್ಕಾರಿ ಸಾರ್ವಜನಿಕ ಬಾಲಕಿಯರ ವಿದ್ಯಾರ್ಥಿ ನಿಲಯ		
		ಪುತ್ತೂರು	೧೨೫ – ವಿದ್ಯಾರ್ಥಿಗಳು.
೨೨.	,,	ಸೂಳ್ಯ	೧೨೫ – ,,
೨೩.	,,	ಉಡುಪಿ	೫೩ – ,,
೨೪.	,,	ಯಬೆತೋಡಿ, ಉಡುಪಿ ತಾ.	೫೦ – ,,
೨೫.	,,	ಬೆಳ್ತಂಗಡಿ	೫೦ – ,,
			೧೪೦೬ ವಿದ್ಯಾರ್ಥಿಗಳು.

ಪರಿಶಿಷ್ಟ ವರ್ಗ

೧.	ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ,		
		ಮುಂಡಾಜೆ, ಬೆಳ್ತಂಗಡಿ ತಾ.	೪೫ – ವಿದ್ಯಾರ್ಥಿಗಳು.
೨.	,,	ಬೆಳ್ತಂಗಡಿ	೭೨ – ,,
೩.	,,	ಬಾಳಿಲ, ಸೂಳ್ಯ ತಾ.	೨೫ – ,,
೪.	,,	ಕಾಪು, ಬೆಳ್ತಂಗಡಿ ತಾ.	೨೫ – ,,
೫.	,,	ಶಂಕರನಾರಾಯಣ, ಕುಂದಾಪುರ ತಾ.	೫೦ – ,,
೬.	,,	ಪಾಳ್ಯ ತಾಂಡ, ಬಂಟ್ವಾಳ ತಾ,	೨೪ – ,,
೭.	,,	ವಿಠಲ, ಬಂಟ್ವಾಳ ತಾ.	೭೫ – ,,
೮.	,,	ಅಜೇತರ ಕಾರ್ಕಳ ತಾ.	೫೦ – ,,
			ಒಟ್ಟು ೩೬೭ ವಿದ್ಯಾರ್ಥಿಗಳು.

ಇ) ಹೌದು.

ಈ) ಇಲ್ಲ.

ರಾಜ್ಯದಲ್ಲಿ ಒಟ್ಟಿರುವ ಹರಿಜನ ಗಿರಿಜನ ವಿದ್ಯಾರ್ಥಿನಿಲಯಗಳ ಬಗ್ಗೆ

೧೩೬೬ (ಬಿ) ಶ್ರೀಮತಿ ಸಂಮಾ ವಸಂತ (ವಿರಾಜಪೇಟೆ).—ಮಾನ್ಯ ಸಮಾಜಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಇರುವ ಹರಿಜನ ಗಿರಿಜನ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಇಲಾಖಾವತಿಯಿಂದ ಕಟ್ಟಿಲ್ಪಟ್ಟ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಇ) ಕೊಡಗು ಜಿಲ್ಲೆಯಲ್ಲಿ ಇರುವ ಒಟ್ಟು ಹರಿಜನ ಗಿರಿಜನ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಈ) ವಿರಾಜಪೇಟೆ ವಿದ್ಯಾರ್ಥಿನಿಲಯದ ದುರಸ್ತಿ ಹಾಗೂ ಹೊಸ ಕಟ್ಟಡ ನಿರ್ಮಾಣಕ್ಕೆ ೧೯೮೪-೮೫ರಲ್ಲಿ ಮಂಜೂರಾದ ಹಣವೆಷ್ಟು?